



# ಆರದ ಆಶಾವಾದದ ಹಣತೆ

# ಜೇನ್ ಗುಡಾಲ್

**ಚಿಂಪಾಂಜಿಗಳ ಬಗ್ಗೆ ವಿಶೇಷ ಕಾಳಜಿಯಿಂದ ಅಧ್ಯಯನ ಮಾಡಿದ ಜೇನ್ ಗುಡಾಲ್ ಹೊಸ ಸತ್ಯಗಳನ್ನು ಹುಡುಕಿದರು. ಚಿಂಪಾಂಜಿಗಳು ಸಲಕರಣೆ ಬಳಸುವ ಕೌಶಲ್ಯ ಕಂಡು ದಿಗ್ಭ್ರಮೆಗೊಂಡರು. ಆಕೆಯ ಕುತೂಹಲದ ಕಣ್ಣು ಮಾನವ ವಿಕಾಸದ ಹಾದಿಯತ್ತ ಬೆಳಕು ಚೆಲ್ಲಿತು.**




■ **ನೇಮಿಚಂದ್ರ**

ದಿನಾಂಕ 1 ಅಕ್ಟೋಬರ್ 2025ರಂದು, 91ರ ವಯಸ್ಸಿನಲ್ಲಿ ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞೆ ಜೇನ್ ಗುಡಾಲ್, ಬಿಡುವಿಲ್ಲದೆ ದುಡಿದು ವಿರಮಿಸಿದರು. ವರ್ಷವಿಡೀ ಒಂದಲ್ಲ ಒಂದು ದೇಶಕ್ಕೆ ಭೇಟಿ ಕೊಡುತ್ತಾ, ಪರಿಸರ ಸಂರಕ್ಷಣೆ ಮತ್ತು ವಿಶ್ವಶಾಂತಿ ಬಗ್ಗೆ ಜಾಗೃತಿ ಮೂಡಿಸುತ್ತಾ ಆರು ದಶಕಗಳನ್ನು ಕಳೆದಿದ್ದರು. ಆ ದಿನ ಕ್ಯಾಲಿಫೋರ್ನಿಯಾದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಕಾಡ್ಗಿಚ್ಚಿನಿಂದ ಧ್ವಂಸವಾದ ನೆಲದಲ್ಲಿ ಸಸಿ ನೆಡುವ ಕಾರ್ಯದಲ್ಲಿ ಭಾಗಿಯಾಗಲಿದ್ದರು.

22 ವರ್ಷಗಳ ಹಿಂದೆ ನಾನವರ ಸಂದರ್ಶನ ಪಡೆದಿದ್ದೆ. ‘ಸುಧಾ’ದಲ್ಲಿ ಅದು ಪ್ರಕಟವಾಗಿತ್ತು. ಡಿಸೆಂಬರ್ 1995ರ ‘ನ್ಯಾಷನಲ್ ಜಿಯಾಗ್ರಫಿಕ್’ ಪತ್ರಿಕೆಯ ಮುಖಪುಟದಲ್ಲಿ ತಮ್ಮ ಪ್ರಿಯವಾದ ಚಿಂಪಾಂಜಿಯೊಡನೆ ಇದ್ದರು. ಆ ಲೇಖನ ನನಗೆ ಅವರನ್ನು ಪರಿಚಯಿಸಿತ್ತು. ಮುಂದೊಮ್ಮೆ ಅದರ ಮೇಲೆ ಆಕೆಯ ಆಟೊಗ್ರಾಫ್ ಹಾಕಿಸಿಕೊಳ್ಳುವ ಅವಕಾಶ ಸಿಗುತ್ತದೆ ಎಂದು ಭಾವಿಸಿರಲಿಲ್ಲ.

ಜೇನ್ ಗುಡಾಲ್ ಏಪ್ರಿಲ್ 3. 1934ರಂದು ಲಂಡನ್ನಿನಲ್ಲಿ ಹುಟ್ಟಿದರು. ಇಂಗ್ಲಿಷ್ ಕಾಲುವೆ ಬಳಿಯಿದ್ದ ಅಜ್ಜಿಯ ಮನೆಯಲ್ಲಿ ಬಾಲ್ಯ ಕಳೆದಿತ್ತು. ಅಜ್ಜಿ ಮನೆಯ ತುಂಬ ಪುಸ್ತಕಗಳಿದ್ದವು.